ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು,ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ಆ/ಪಿಆರ್/10013/18-19 ದಿನಾಂಕ: 29-1-19

(1) ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಯಲಹಂಕ, ಯೋಜನೆ-ಕೇಂದ್ರ, ಟಿಪಿಸಿಸಿ ಮತ್ತು ಇತರೆ ಮೂಲಭೂತ ಸೌಕರ್ಯ)

ಬಿ.ಬಿ.ಎಂ.ಪಿ. ಆಯುಕ್ತರ ಆನ್ಲೈನ್ ಕಾರ್ಯಾಲಯ
ಸಂಖ್ಯೆ ಬಿ.ಎಸ್ (4)...10013.....
ದಿನಾಂಕ....29/1/19.....

ವಿಷಯ:-ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಮೇ||ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ನೀಡಿರು ಆದೇಶದ ತಿದ್ದುಪಡಿಯ ಬಗ್ಗೆ.

ಉಲ್ಲೇಖ:-(1)ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ಕಛೇರಿ ಆದೇಶ ಸಂಖ್ಯೆ:ಆಇ/344/ಮೆಟ್ರೋ-12/2018, ದಿ:06.04.18.
(2)ಈ ಕಛೇರಿಯ ಆದೇಶದ ಸಂಖ್ಯೆ:ಆ/ಪಿ.ಆರ್./1075/2018-19, ದಿ:11-07-2018.
(3)ಈ ಕಛೇರಿಯ ಪತ್ರದ ಸಂಖ್ಯೆ:ಆ/ಪಿಆರ್/5054/2017-18, ದಿ:20-11-2017.

****

ಮೇಲ್ಕಂಡ ಉಲ್ಲೇಖ (1) ರ ಆದೇಶದಲ್ಲಿ ಮೇ||ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ 2018-19 ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕ ಅಧಿನಿಯಮ 1999 ರ ಕಲಂ 4 (ಜಿ) ಅಡಿ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಅಧಿಸೂಚನೆ ಜಾರಿ ಮಾಡಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು (ಮಾಜಿ ಮಹಾಪೌರರು ಹಾಗೂ ಉಪ ಮಹಾಪೌರರು ಅಧ್ಯಕ್ಷೆ ಮಾಡುವ ವಿಶೇಷ ಕಾಮಗಾರಿಗಳು ಮತ್ತು ತೆರಿಗೆ ಮತ್ತಿತರ ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಒಳಗೊಂಡಂತೆ) ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ತದನಂತರ ಮೇಲ್ಕಂಡ ಉಲ್ಲೇಖ (1) ರ ಆದೇಶದಲ್ಲಿ ಪ್ರಸ್ತಾಪಿತ ಷರತ್ತುಗಳಿಗೆ ನಿಯಮಾನುಸಾರ ಕ್ರಮವಹಿಸಿ ಮೇ||ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಮೇಲ್ಕಂಡ ಉಲ್ಲೇಖ (2) ರ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಉಲ್ಲೇಖ (2) ಆದೇಶದಲ್ಲಿ ಆದೇಶಿಸಿದಂತೆ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು (ಮಾಜಿ ಮಹಾಪೌರರು ಹಾಗೂ ಉಪ ಮಹಾಪೌರರು ಅಧ್ಯಕ್ಷೆ ಮಾಡುವ ವಿಶೇಷ ಕಾಮಗಾರಿಗಳು ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಒಳಗೊಂಡಂತೆ) ಅನುಷ್ಠಾನಗೊಳಿಸಲು ಮೇ||ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಕ್ರಮವನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

"2018-19 ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕ ಅಧಿನಿಯಮ - 1999 ರ ಕಲಂ 4 (ಜಿ) ಅಡಿ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಅಧಿಸೂಚನೆ ಜಾರಿ ಮಾಡಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಮೇಲ್ಕಂಡ ಉಲ್ಲೇಖ (3) ರ ಆದೇಶದಲ್ಲಿ ಆದೇಶಿಸಿದಂತೆ ಸ್ಥಿತಿ ಕಾಮಗಾರಿಗಳನ್ನು (ರೂ.50.00 ಲಕ್ಷಗಳಿಗೆ ಮೀರದಂತಹ ಕಾಮಗಾರಿಗಳು) ರ್ಯಾಂಡಮೈಜೇಷನ್ ಮಾಡಿ ಸದರಿ ಆದೇಶದಂತೆ

Scanned by CamScanner

ಕ್ರಮವಹಿಸಿ ಇತೆರೆ ವರ್ಗಕ್ಕೆ ಮೀಸಲಿಡಲಾದ ತುರ್ತು ಕಾಮಗಾರಿಗಳನ್ನು ಮುಖ್ಯ ಅಭಿಯಂತರರು ರವರ ಶಿಫಾರಸ್ಸಿನಂತೆ (ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳನ್ನು ಹೊರತುಪಡಿಸಿ) ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ತದನಂತರ ಮೇಲ್ಕಂಡ ಉಲ್ಲೇಖ (1) ರ ಅಡಿಯಲ್ಲಿ ಪ್ರಸ್ತಾಪಿತ ಷರತ್ತುಗಳಿಗೆ ನಿಯಮಾನುಸಾರ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಿದೆ".

"ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಪ್ರಸ್ತಾವನೆಗಳನ್ನು ಮೇಲ್ಕಂಡ ಉಲ್ಲೇಖ (3) ರ ಅಡಿಯಲ್ಲಿ ಸೂಚಿಸಿದಂತೆ ಪ್ರತ್ಯೇಕ ಕಾಮಗಾರಿಗಳನ್ನು (ರೂ.50.00 ಲಕ್ಷಗಳಿಗೆ ಮೀರದಂತಹ ಕಾಮಗಾರಿಗಳಿಗೆ ಮಾತ್ರ) ರ್ಯಾಡಂಮೈಜೇಷನ್ ಮಾಡಿ ಆದೇಶದಲ್ಲಿ ತಿಳಿಸಿದಂತೆ ಕ್ರಮವಹಿಸಿ ತದನಂತರ ಎಲ್ಲಾ ಪ್ರತ್ಯೇಕ ಪ್ರಸ್ತಾವನೆಗಳನ್ನು ಪ್ರಧಾನ ಅಭಿಯಂತರರು ರವರ ಮುಖಾಂತರ ವಿಶೇಷ ಆಯುಕ್ತರು (ಯೋಜನೆ) ರವರ ಅನುಮೋದನೆ ಪಡೆದು ನೇರವಾಗಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಎಲ್ಲಾ ಮುಖ್ಯ ಅಭಿಯಂತರರುಗಳು ಮತ್ತು ಕಾರ್ಯಪಾಲಕ ಅಭಿಯಂತರರುಗಳು ಕ್ರಮ ವಹಿಸುವುದು".

ಸದರಿ ಆದೇಶವು ತತ್ಕ್ಷಣದಿಂದ ಜಾರಿಗೆ ಬರುತ್ತಿದ್ದು, ಸದರಿ ಆದೇಶವು ಈಗಾಗಲೇ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ವಹಿಸಲು ಸೂಕ್ತ ಆದೇಶಕ್ಕಾಗಿ ಚಲಾವಣೆಯಲ್ಲಿರುವ ಕಡತಗಳಿಗೂ ಸಹ ಅನ್ವಯಿಸುತ್ತಿದ್ದು, ಅಂತಹ ಕಡತಗಳನ್ನು ತತ್ಕ್ಷಣ ಹಿಂಪಡೆದು ಮೇಲ್ಕಂಡ ಆದೇಶದಂತೆ ಕ್ರಮವಹಿಸಲು ಸೂಚಿಸಿದೆ.

ಆಯುಕ್ತರು
23/1/14
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಅವ್ಪ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅವ್ಪ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಅಡಳಿತ ಪಕ್ಷ / ವಿರೋಧ ಪಕ್ಷ / ಜೆಡಿಎಸ್ (ಪಕ್ಷ) ದ ನಾಯಕರುಗಳ ಅವಗಾಹನೆಗೆ ತರಲು ಅವ್ಪ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅವಗಾಹನೆಗೆ ತರಲು ಅವ್ಪ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಅವ್ಪ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಪ್ರಧಾನ ಅಭಿಯಂತರರು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ /ಮಾನ್ಯ ವಿಶೇಷ ಆಯುಕ್ತರು (ಪೂರ್ವ) / ಮಾನ್ಯ ವಿಶೇಷ ಆಯುಕ್ತರು (ಯೋಜನೆ)/ ಮಾನ್ಯ ಅಪರ ಆಯುಕ್ತರು (ಅಡಳಿತ) / ಮಾನ್ಯ ಅಪರ ಆಯುಕ್ತರು (ಆರೋಗ್ಯ) / ಮಾನ್ಯ ಅಪರ ಆಯುಕ್ತರು (ಕಲ್ಯಾಣ) ರವರುಗಳಿಗೆ ಕಳುಹಿಸಿದೆ.
7. ಮಾನ್ಯ ಉಪ ಆಯುಕ್ತರು (ಅಡಳಿತ) / ಮುಖ್ಯ ಲೆಕ್ಕಾಧಿಕಾರಿಗಳು / ಮುಖ್ಯ ಲೆಕ್ಕ ಪರಿಶೋಧಕರು / ಪ್ರಧಾನ ನಿಯಂತ್ರಕರು (ಪೂರ್ವ) ರವರುಗಳಿಗೆ ಕಳುಹಿಸಿದೆ.
8. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9. ಎಲ್ಲಾ ವಲಯ ಸಹಾಯಕ ನಿಯಂತ್ರಕರು (ಪೂರ್ವ) ರವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸುತ್ತಾ, ಪ್ರಸ್ತಾಪಿತ ವಿಷಯದ ಬಗ್ಗೆ ವೈಯಕ್ತಿಕ ಗಮನಹರಿಸಲು ಸೂಚಿಸಿದೆ.
11. ಎಲ್ಲಾ ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸುತ್ತಾ ಪ್ರಸ್ತಾಪಿತ ವಿಷಯದ ಬಗ್ಗೆ ವೈಯಕ್ತಿಕ ಗಮನಹರಿಸಲು ಸೂಚಿಸಿದೆ.

Scanned by CamScanner

ಕರ್ನಾಟಕ ಸರ್ಕಾರ

ಸಂಖ್ಯೆ:- ಆಯುಕ/1075/18-19 ದಿನಾಂಕ: 11-07-2018

ಆಂತರಿಕ ಕಛೇರಿ ಟಿಪ್ಪಣಿ

ವಿಷಯ: ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ಮುಖ್ಯ ಕಛೇರಿಯ ಕಟ್ಟಡದ ಆವರಣದಲ್ಲಿ ಕಾಮಗಾರಿಗಳನ್ನು ಮೆ//ಕೆಆರ್‌ಐಡಿಎಲ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ರವರ ಟಿಪ್ಪಣಿ

ಸಂಖ್ಯೆಸಂಇ/344/ಪಸ್ಕಿ-12/2018 ದಿ.06.04.2018

....

ಮೇಲ್ಕಂಡ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರ ಮಾನ್ಯರವರ ಪೀಠಾಸೀನದಲ್ಲಿ ನಡೆದ ಸಭೆಯಲ್ಲಿ (ಸಭೆಯ ನಡವಳಿಕೆಯ ಪ್ರತಿಯನ್ನು ಲಗತ್ತಿಸಿದೆ) 2018-19ನೇ ಸಾಲಿನಲ್ಲಿ ಪಾಲಿಕೆಯ ಕಟ್ಟಡಗಳಲ್ಲಿ ಸಮಗ್ರವಾಗಿ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ಅನುಮೋದನೆ ಪಡೆದಿರುವ ಕಾಮಗಾರಿಗಳನ್ನು ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಮಾರ್ಗಸೂಚಿಯಲ್ಲಿ ಅವಕಾಶವಿದ್ದು ಈ ಕುರಿತು ಸರ್ಕಾರದ ಉಲ್ಲೇಖ-1ರಲ್ಲಿ ಆದೇಶಿಸಿದೆ. ಅದರಂತೆ ಮುಂದಿನ ಕ್ರಮಕ್ಕಾಗಿ ಈ ಮಾಹಿತಿಯನ್ನು ಸಲ್ಲಿಸಿದೆ.

ಬೃಹತ್ ಮಹಾನಗರ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಮುಖ್ಯ ಕಛೇರಿಯ ಆವರಣದಲ್ಲಿ ಸುಮಾರು ರೂ. 50.00 ಕೋಟಿ ಅಂದಾಜಿನ ಕಾಮಗಾರಿಗಳನ್ನು (ನೂರು ಮಹಾಪೌರರು ಹಾಗೂ ಉಪ ಮಹಾಪೌರರು ಅಲ್ಲಿ ಮಾಡುವ ಪೀಠ ಸಿದ್ಧಪಡಿಸುವುದು ಹೊರತುಪಡಿಸಿ) ಕೆಆರ್‌ಐಡಿಎಲ್ ಸಂಸ್ಥೆಯ ಮೂಲಕ ಸುಧಾರಿಸಿ ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳನ್ನು ಬಿಬಿಎಂಪಿ ಸಮಿತಿಯ ಮೂಲಕ ಸುಧಾರಿಸಿ ಕೈಗೊಳ್ಳಲು ಕಾರ್ಯದರ್ಶಿ ಅನುಮೋದನೆ ಪಡೆದು, ತದನಂತರ ಉಲ್ಲೇಖ(1)ರಲ್ಲಿ ಸೂಚಿಸಿರುವಂತೆ ಸಂಬಂಧಪಟ್ಟವರಿಂದ ಮೆ//ಕೆಆರ್‌ಐಡಿಎಲ್ ಮುಖಾಂತರ ಅನುಷ್ಠಾನಗೊಳಿಸಲು ಕೋರಿದೆ.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

(1)ಪ್ರಧಾನ ಸಿವಿಲ್ ಸರ್ಜನ್‌ರವರು ಕರ್ನಾಟಕ ಸರ್ಕಾರ ಬಹುಮಹಡಿ ಕಟ್ಟಡ ಆವರಣ (ಕೆಆರ್‌ಐಡಿಎಲ್ ಒಂದನೇ ಕಟ್ಟಡ), ಕೆ.ಸಿ.ದಾಸ್ ರಸ್ತೆಯಲ್ಲಿ ಇರುವ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.

(2)ಜಂಟಿ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ ಸಲ್ಲಿಸಿದೆ.

(3)ಪ್ರದಾನ ಅಭಿಯಂತರರು ರವರ ಮಾಹಿತಿಗಾಗಿ ಸಲ್ಲಿಸಿದೆ.

(4)ಪಾಲಿಕೆಯ ಮುಖ್ಯ ಜಂಟಿ/ಅಪರ/ಆಯುಕ್ತರು ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಮಾಹಿತಿ ಕಳುಹಿಸಿ ಸಲ್ಲಿಸಿದೆ.

(5) ಮುಖ್ಯ ಅಧೀಕ್ಷಕ ಅಭಿಯಂತರು / ಲೆಕ್ಕಾಧಿಕಾರಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(6) ಕಛೇರಿಯ ಪ್ರತಿ.

Scanned by CamScanner

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್
(ಒಂದಿನ ಜಸವು ಕರ್ನಾಟಕ ಭೂಸಿರಿ ನಿಗಮ ನಿ.) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಲಯ
ಸಂ.52, 4ನೇಮಹಡಿ,ಶೈಷ್ಣಜ್‌ಹೊಸ್ಟ್ಗ ಚೀಂಬರ್, ಇನ್ಫಾಂಟ್ರಿರಸ್ತೆ, ಪೀಣ್ಯಾಪ್ರಪುರಂ, ಬೆಂಗಳೂರು-560020
ಸಂ:ಕ.ಇ/ಕೆಆರ್‌ಐಡಿಎಲ್/ಬಿಬಿಎಂಪಿ ವಲಯ/ಕಾಮಗಾರಿ/2018-19/ 131 ದಿನಾಂಕ:02.07.2018

ರವರಿಗೆ,
ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಪ್ರಧಾನ ಅಭಿಯಂತರರು ರವರ ಕಛೇರಿ
ನರಸಿಂಹ ರಾಜ ಚೌಕ, ಬೆಂಗಳೂರು-02

ಮಾನ್ಯರೇ,

ವಿಷಯ:- 2018-19 ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯ ಮೂಲಕ ಕೈಗೊಳ್ಳಲು ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿರುವ ಆದೇಶದ ಬಗ್ಗೆ.

ಉಲ್ಲೇಖ:- 1.ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ಕಛೇರಿ ಆದೇಶ ಸಂಖ್ಯೆ:ಆಇ/344/ ವೆಚ್ಚ-12/2018, ದಿ.06.04.2018
2.ಪ್ರಧಾನ ಅಭಿಯಂತರರು ಬಿಬಿಎಂಪಿ ರವರ ಪತ್ರ ಸಂ.ಆ/ಜಿ.ಆರ್/584/18-19 ದಿ.30.06.2018

****

ಮೇಲ್ಕಂಡ ಉಲ್ಲೇಖ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣ ಸಂಸ್ಥೆಗಳ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯ ಮೂಲಕ ಕೈಗೊಳ್ಳಲು ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ಆದರಂತೆ 2018-19 ನೇ ಸಾಲಿನಲ್ಲಿ ತಮ್ಮ ಇಲಾಖೆಯ 2.00ಕೋಟಿ ಮೊತ್ತದ ವರೆಗಿನ ಕಾಮಗಾರಿಗಳನ್ನು ನೇರವಾಗಿ ನಮ್ಮ ಸಂಸ್ಥೆಗೆ ನೀಡಬಹುದಾಗಿರುತ್ತದೆ.

ಉಲ್ಲೇಖ (1) ರ ಆದೇಶದಲ್ಲಿ ಕ್ರಮ ಸಂಖ್ಯೆ (2) ರಲ್ಲಿ 2019 ನೇ ಸಾಲಿನ ನಂತರ KHB ಮಾದರಿಯಲ್ಲಿಯೇ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ. ಈ ವಿಷಯವಾಗಿ KRIDL ಸಂಸ್ಥೆಯ ಆಡಳಿತ ಮಂಡಳಿ ಸರ್ಕಾರದೊಂದಿಗೆ ಚರ್ಚಿಸಿ ನಿರ್ಧರಿಸಿರುತ್ತಾರೆ. ಆದ್ದರಿಂದ 2018-19 ನೇ ಸಾಲಿನ ಕಾಮಗಾರಿಗಳನ್ನು ನಮ್ಮ ಸಂಸ್ಥೆಗೆ ನೇರವಾಗಿ ಪಡಿಸಿಕೊಡುವ ಯಾವುದೇ ಅಭ್ಯಂತರವಿರುವುದಿಲ್ಲವೆಂಬ ವಿಷಯವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ
ಕಾ.ಕ.[illegible]
ಅಧೀಕ್ಷಕ ಅಭಿಯಂತರರು
ಕೆಆರ್‌ಐಡಿಎಲ್ ಬಿಬಿಎಂಪಿ ವಲಯ
ಬೆಂಗಳೂರು.

ಪ್ರತಿಯನ್ನು:
1.ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, Karnataka Rural Infrastructure Development Limited, Infantary Road, near KSCA Stadium, ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2. ಮಾನ್ಯ ವಿಶೇಷ ಆಯಕ್ತರು, ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

Scanned with CamScanner
Scanned by CamScanner

ಸಂಜಾಇ 344 ಮೆಚ್ಚ-12/2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:06.04.2018

ಅಧಿಸೂಚನೆ

ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗಡಣಾ ಸಂಸ್ಥೆಗಳು ಈ ಕೆಳಕಂಡ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್ - ಹಿಂದಿನ ಕೆಎಲ್‌ಎಸ್‌ಎ) ಸಂಸ್ಥೆಯ ಮೂಲಕ ಗರಿಷ್ಠ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗಡಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19 ನೇ ಸಾಲಿಗೆ ಈ ಕೆಳಕಂಡ ಹೊರತುಗೊಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(i) ಎಲ್ಲಾ ತರಹದ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ, ಲೇಔಟ್ ನಿರ್ಮಾಣ, ಸಂಬಂಧಿಸಿದ ಎಲ್ಲಾ ಎಲೆಕ್ಟ್ರಿಕಲ್ ಕಾಮಗಾರಿಗಳ ನಿರ್ಮಾಣ, ರಸ್ತೆ ದೀಪಗಳ ನಿರ್ವಹಣೆ.

(ii) ಮೂಲಭೂತ ಸೌಕರ್ಯದ ಕಾಮಗಾರಿಗಳು ಮತ್ತು ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ.

(iii) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗಳು.

ಷರತ್ತುಗಳು:

1) ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗತಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ, ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗಡಣಾ ವೇದಿಕೆಯ ಮೂಲಕ ಕೈಗೊಳ್ಳಬೇಕು.

2) ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, KHB ಹೊರತುಪಡಿಸಿದಂತೆ KRIDL ಸಂಸ್ಥೆಯು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು.

3) ಸರ್ಕಾರದ ಇಲಾಖೆಗಳು/ನಿಗಮಗಳು/ಮಂಡಳಿಗಳು ಯಾವುದೇ ಕಾಮಗಾರಿಗಳನ್ನು Split ಮಾಡಿ KRIDLಗೆ ವಹಿಸಬಾರದು.

4) ಉತ್ತಮ ಗುಣಮಟ್ಟದ ಕಾಮಗಾರಿ/ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಬಂಧಪಟ್ಟ ಇಲಾಖೆಗಳು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

07 APR 2018
126

(ಪಿ.ಎನ್.ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪ್ರತಿಗೆ:

ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ಪಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 20 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3) ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು - 10 ಪ್ರತಿಗಳು.
4) ಹೆಚ್ಚುವರಿ ಪ್ರತಿ.

Scanned by CamScanner